
## ನಿಮ್ಮೊಡನೆ

# ಇಂಗ್ಲಿಷ್ ಮಾಧ್ಯಮವೆಂಬ ಸರ್ಕಾರಿ ಭ್ರಮೆ

> ಇಂಗ್ಲಿಷ್ ಮಾಧ್ಯಮ ಶಿಕ್ಷಣ ಎನ್ನುವುದು ದೊಡ್ಡ ಆಕರ್ಷಣೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಇಂಗ್ಲಿಷ್ ಮಾಧ್ಯಮವನ್ನಾಗಿ ರೂಪಾಂತರಿಸುವುದರಿಂದ ಮಾತ್ರ ಸರ್ಕಾರಿ ಶಾಲೆಗಳ ಸುಧಾರಣೆ ಸಾಧ್ಯ ಎನ್ನುವುದು ಭ್ರಮೆ. ಸರ್ಕಾರ ತನ್ನ ಬದ್ಧತೆ ಮತ್ತು ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಜಾಣ ನಡೆಯೂ ಹೌದು.




ಒಂದು ಸಾವಿರ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭಿಸುವ ಚಿಂತನೆ ರಾಜ್ಯ ಸರ್ಕಾರದ ಚಿಂತಕರ ಚಾವಡಿಯಲ್ಲಿ ಸುಳಿದಾಡುತ್ತಿದೆ. ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗಳಲ್ಲಿ ಕಡಿಮೆಯಾಗುತ್ತಿರುವ ಮಕ್ಕಳ ಹಾಜರಾತಿಯ ಸಮಸ್ಯೆಗೆ ಸರ್ಕಾರ ಕಂಡುಕೊಳ್ಳುತ್ತಿರುವ ಉತ್ತರ ಈ ಇಂಗ್ಲಿಷ್ ಮಾಧ್ಯಮ. ತಮ್ಮ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ ಅವರು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸುವ ಯೋಚನೆ ಹಂಚಿಕೊಂಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇಂಗ್ಲಿಷ್ ಎನ್ನುವ ಮೋಹನ ಮುರಲಿಯ ಬೆನ್ನುಬಿದ್ದಿರುವ ಮಕ್ಕಳು ಸರ್ಕಾರಿ ಶಾಲೆಗಳಿಗೆ ವಿಮುಖವಾಗುತ್ತಿರುವುದು ರಾಜ್ಯಕ್ಕೆ ಸೀಮಿತವಾದ ವಿದ್ಯಮಾನವಲ್ಲ. ದೇಶದ ಎಲ್ಲ ರಾಜ್ಯಗಳಲ್ಲೂ ಅಲ್ಲಿನ ಮಾತೃಭಾಷಾ ಶಾಲೆಗಳಲ್ಲಿ ಖಾಸಗಿ ಶಾಲೆಗಳು ಆತಂಕ ಒಡ್ಡುತ್ತವೇ ಇವೆ. 2008ರಲ್ಲಿ ದೇಶದ ಶೇ. 72ರಷ್ಟು ಮಕ್ಕಳು ಸರ್ಕಾರಿ ಶಾಲೆಗಳಿಂದ ಶಿಕ್ಷಣ ಹೊಂದುತ್ತಿದ್ದರೆ, 2014ರಲ್ಲಿ ಈ ಪ್ರಮಾಣ ಶೇ. 62ಕ್ಕೆ ಕುಸಿದಿತ್ತು. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಶಾಲೆಗಳ ಪ್ರಾಬಲ್ಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಪರಿಚಯಿಸುವ ಪ್ರಯೋಗಕ್ಕೆ ಕೆಲವು ರಾಜ್ಯಗಳು ಮುಂದಾಗಿವೆ. 2003ರಿಂದ ಜಮ್ಮು ಮತ್ತು ಕಾಶ್ಮೀರದಲ್ಲಿನ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಕಲಿಕೆಯ ಮಾಧ್ಯಮವನ್ನಾಗಿ ಇಂಗ್ಲಿಷನ್ನು ಒಪ್ಪಿಕೊಳ್ಳಲಾಗಿದೆ. ಪಂಜಾಬ್‌ನಲ್ಲಿನ ಸುಮಾರು 1500 ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಜಾರಿಗೆ ತರಲಾಗಿದೆ. ಇದೇ ವರ್ಷದ ಏಪ್ರಿಲ್‌ನಲ್ಲಿ ಉತ್ತರಪ್ರದೇಶದಲ್ಲಿನ 5000 ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಬದಲಿಸಲಾಗಿತ್ತು. ತೆಲಂಗಾಣ ಸರ್ಕಾರ ಕೂಡ ಆಯ್ದ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಪರಿಚಯಿಸಿದೆ. ಮಧ್ಯಪ್ರದೇಶ, ತಮಿಳುನಾಡುಗಳಲ್ಲೂ ಇಂಥ ಪ್ರಯೋಗಗಳು ನಡೆದಿವೆ. ಇಲ್ಲೆಲ್ಲ ಮಕ್ಕಳ ಹಾಜರಾತಿಯಲ್ಲಿ ಗಣನೀಯ ಸುಧಾರಣೆ ಕಾಣಿಸಿದೆ ಎಂದು ದಕ್ಷಿಣ ಭಾರತದ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ನೀಡಿರುವ ವರದಿ ರಾಜ್ಯಸರ್ಕಾರಕ್ಕೆ ಆಶಾಕಿರಣದಂತೆ ಕಾಣಿಸಿದೆ.

ಎಲ್ಲೆಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಆರಂಭವಾಗಿವೆ ಎನ್ನುವುದರ ಜೊತೆಗೆ, ಅವುಗಳಲ್ಲಿನ ಕಲಿಕೆಯ ಗುಣಮಟ್ಟವನ್ನೂ ಪರಿಶೀಲಿಸಬೇಕಾಗಿದೆ. ಪಂಜಾಬ್‌ನಲ್ಲಿನ ಬಹುತೇಕ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳೇ ಸರಿಯಾಗಿಲ್ಲ ಎಂದು ಪತ್ರಿಕಾವರದಿಗಳು ಹೇಳುತ್ತಿವೆ. ಇಂಗ್ಲಿಷ್ ಮಾಧ್ಯಮ ಹೊಂದಿದ್ದರೂ ಉತ್ತರಪ್ರದೇಶದ ಬಹುತೇಕ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸಲು ಹಿಂದಿಯನ್ನು ಬಳಸಲಾಗುತ್ತಿದೆಯಂತೆ. ನಮ್ಮ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಕೂಡ ಮಕ್ಕಳಿಗೆ ಇಂಗ್ಲಿಷನ್ನು ಕಲಿಸುತ್ತಿರುವುದು ಕನ್ನಡದ ಮೂಲಕವೇ.

ಇಂಗ್ಲಿಷ್ ಮಾಧ್ಯಮ ಎನ್ನುವುದು ವಿದ್ಯಾರ್ಥಿಗಳು ಹಾಗೂ ಪಾಲಕರ ಪಾಲಿಗೆ ದೊಡ್ಡ ಆಕರ್ಷಣೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಇಂಗ್ಲಿಷ್ ಮಾಧ್ಯಮವನ್ನಾಗಿ ರೂಪಾಂತರಿಸುವುದರಿಂದ ಮಾತ್ರ ಸರ್ಕಾರಿ ಶಾಲೆಗಳ ಸುಧಾರಣೆ ಸಾಧ್ಯ ಎನ್ನುವುದು ಭ್ರಮೆ. ಇದು, ಪ್ರಾಥಮಿಕ ಶಿಕ್ಷಣದ ಕುರಿತಂತೆ ಸರ್ಕಾರ ತನ್ನ ಬದ್ಧತೆ–ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಜಾಣ ನಡೆಯೂ ಹೌದು. ಈಗಾಗಲೇ ಕನ್ನಡ ಶಾಲೆಗಳನ್ನು ಪ್ರತಿವರ್ಷವೂ ಮುಚ್ಚುತ್ತಿರುವ ಸರ್ಕಾರ, ಮಾಧ್ಯಮದಲ್ಲಿನ ಬದಲಾವಣೆಯ ನಂತರವೂ ಹಾಜರಾತಿ ಸುಧಾರಿಸಲಿಲ್ಲವೆಂದು ನೆಪಹೇಳಿ, ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನೇ ಮುಂದೊಂದು ದಿನ ಖಾಸಗೀಕರಣ ಮಾಡಿದರೂ ಆಶ್ಚರ್ಯವಿಲ್ಲ.

ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸುವುದನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಸ್.ಜಿ. ಸಿದ್ಧರಾಮಯ್ಯ ವಿರೋಧಿಸುತ್ತಾರೆ. ‘2017ರ ಕಾಯ್ದೆಯ ಪ್ರಕಾರ ಖಾಸಗಿ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿ ಕಲಿಸಬೇಕಾಗಿದೆ. ಈ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಸದ್ಯದ ತುರ್ತು’ ಎನ್ನುವುದು ಅವರ ಅಭಿಮತ.

ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಪರಿಣಾಮಕಾರಿಯಾಗಿ ಕಲಿಸುವುದು ಸರ್ಕಾರ ಮಾಡಬೇಕಾಗಿರುವ ಕೆಲಸ. ಅದಕ್ಕೆ ಕೂಡ ತರಬೇತಿ ಪಡೆದ ಶಿಕ್ಷಕರ ಸಂಖ್ಯೆ ನಮ್ಮ ಶಾಲೆಗಳಲ್ಲಿ ಎಷ್ಟಿದೆ ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ. ಸರ್ಕಾರಿ ಶಾಲೆಗಳನ್ನು ಬಲಗೊಳಿಸುವ ಬಗ್ಗೆ ಈವರೆಗಿನ ಸರ್ಕಾರಗಳ ಕಾಳಜಿ ಹೇಳಿಕೆ ಹಾಗೂ ಮಾತುಗಳಲ್ಲಿದೆಯೇ ಹೊರತು ಕಾರ್ಯರೂಪದಲ್ಲಿ ಕಾಣಿಸಿಕೊಂಡಿರುವುದು ಕಡಿಮೆ. ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ವ್ಯವಸ್ಥೆಗಳನ್ನು ಸರಿಪಡಿಸುವುದು ಹಾಗೂ ಶಿಕ್ಷಕರನ್ನು ಪಠ್ಯೇತರ ಚಟುವಟಿಕೆಗಳಿಂದ ಮುಕ್ತಗೊಳಿಸುವುದು ಸರ್ಕಾರ ಮೊದಲು ಮಾಡಬೇಕಿರುವ ಕೆಲಸ. ಪ್ರಾಥಮಿಕ ಶಿಕ್ಷಣದ ಹೆಸರಿನಲ್ಲಿ ಯಾವಯಾವುದೋ ಯೋಜನೆಗಳಿಗೆ ಪೋಲಾಗುತ್ತಿರುವ ಹಣವನ್ನು ಮೂಲಭೂತ ಸೌಕರ್ಯಗಳಿಗೆ ಖರ್ಚು ಮಾಡಿದರೆ ಎಷ್ಟೋ ಶಾಲೆಗಳು ಹೊಸ ರೂಪ ಪಡೆದುಕೊಳ್ಳುತ್ತವೆ.

■ ರಘುನಾಥ ಚ.ಹ.